**2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾ:ಗೋಕಾಕ**

**ಸಿ.ಸಿ ನಂ. 780/2009**

ದಿ: **06-08-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಚಾ.ಸಾ-10 ಪ್ರಾ.ಸಾ-11

| | | |
|---|---|---|
| ಹೆಸರು | : | ರಮೇಶ ಯಮನಪ್ಪಾ ತಳ್ಳಿ |
| ತಂದೆ ಹೆಸರು | : | ಯಮನಪ್ಪಾ ತಳ್ಳಿ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಗೋಕಾಕ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ-1 ರವರ ಪರಿಚಯ ಇಲ್ಲಾ. ಚಾಸಾ-4, 5 ರವರ ಪರಿಚಯ ಇದೆ. 1, 2, 4 ಮತ್ತು 5 ನೇ ಆರೋಪಿತರ ಪರಿಚಯ ಇರುವುದಿಲ್ಲಾ.

ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಲು ಮಾನ್ಯ ಸ.ಸ.ಅ. ಅವರು ಅನುಮತಿ ಕೋರಿದ್ದು, ಪರಿಶೀಲಿಸಿ ನೋಡಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ:**

ದಿ: 07-12-2008 ರಂದು ಚಾಸಾ-4 ರವರ ಮಗಳು ಚಾಸಾ-1 ಇವರಿಗೆ

19 ವರ್ಷ ಇದ್ದು ಅವಳ ಮದುವೆಯನ್ನು 1 ನೇ ಆರೋಪಿಯ ಜೊತೆಗೆ ತಪಸಿ ಗ್ರಾಮದ ಸುರೇಶ ಮಹಾರಾಜರ ಮಠದಲ್ಲಿ ಮದುವೆಯಾಯಿತು ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ನಾನು ಹಾಗೂ ನಮ್ಮೂರಿನ ಹಿರಿಯರು ಹಾಜರಿದ್ದೆವು ಎಂದರೆ ಸರಿಯಲ್ಲ. ಮದುವೆಯ ನಂತರ ಚಾಸಾ-1 ರವರು 1 ನೇ ಆರೋಪಿತನ ಜೊತೆಗೆ ಬಾಳ್ವೆ ಮಾಡಲು ಗಂಡನ ಮನೆಗೆ ಬಂದಳು ಎಂದರೆ ಸರಿಯಲ್ಲ. ಚಾಸಾ-1 ರವರ ಗಂಡನ ಮನೆ ಮೆಳವಂಕಿ ಗ್ರಾಮ ಎಂದರೆ ಸರಿಯಲ್ಲ. 1 ನೇ ಆರೋಪಿತನ ಮನೆಯಲ್ಲಿ 2 ರಿಂದ 5 ನೇ ಆರೋಪಿತರು ಕೂಡಿಕೊಂಡು ವಾಸ ಮಾಡುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ತನ್ನ ಗಂಡನ ಮನೆಗೆ ಹೋದಾಗ 1 ರಿಂದ 5 ನೇ ಆರೋಪಿತರು ಅವಳಿಗೆ ಚನ್ನಾಗಿ ನೋಡಿಕೊಂಡರು ಎಂದರೆ ಸರಿಯಲ್ಲ.

ನಂತರ 1 ರಿಂದ 5 ನೇ ಆರೋಪಿತರು ಚಾಸಾ-1 ರವರಿಗೆ ನಿನಗೆ ಅಡುಗೆ ಮಾಡಲು ಬರುವುದಿಲ್ಲಾ ಎಂದು ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತಿದ್ದರು ಎಂದು ಚಾಸಾ-1 ರವರ ತಂದೆ ತಾಯಿ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-6 ರಿಂದ 9 ರವರು ಕೂಡಿಕೊಂಡು 1 ನೇ ಆರೋಪಿತನ ಮನೆಗೆ ಹೋಗಿ ಬುದ್ದಿ ಮಾತನ್ನು ಹೇಳಿದೆವು ಎಂದರೆ ಸರಿಯಲ್ಲ. ದಿಃ 11-05-2009 ರಂದು ಆರೋಪಿತನ್ನು ಚಾಸಾ-1 ರವರನ್ನು ಮನೆಯಿಂದ ಹೊರಗೆ ಹಾಕಿದರು ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ಓದಿ ಹೇಳಲಾಗಿದ್ದು, ನಿರಾಕರಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ:** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ಶ್ರೀ. ಅಭಿನಯ)**
**C/c 2 ನೇ ಹೆ.ದಿ.&ನ್ಯಾ.ದಂ.,ಗೋಕಾಕ.**